# ಕ್ರಾಸ್ ಮೆಸೇಜಿಂಗ್

## ಡಿಜಿಟಲ್ ಲೋಕದಲ್ಲಿ ಏಕಾಧಿಪತ್ಯಕ್ಕೆ ಬೇಕಿದೆ ಕಡಿವಾಣ

**ಮೆಸೇಜಿಂಗ್ ಆ್ಯಪ್‌ಗಳಿಂದ ಮತ್ತೊಂದು ಆ್ಯಪ್‌ಗೆ ಮೆಸೇಜ್ ಮಾಡಲು ಸಾಧ್ಯವಾದರೆ, ಬಳಕೆದಾರರಿಗೆ ಇನ್ನಷ್ಟು ಅನುಕೂಲ. ಇಂಥದ್ದೊಂದು ಸಾಧ್ಯತೆಯು ಈಗಾಗಲೇ ಪ್ರಾಯೋಗಿಕ ಹಂತದಲ್ಲಿದೆ.**

**■ ಶಶಿಕುಮಾರ್ ಸಿ.**

ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಅಧೀನದ ‘ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್’ (ಯುಪಿಐ) ದೇಶದೆಲ್ಲೆಡೆ ಜನಪ್ರಿಯ. ಇದು ಅಳವಡಿಸಿಕೊಂಡಿರುವ ಕ್ರಾಸ್ ಪೇಮೆಂಟ್ಸ್ (ಒಂದು ಆ್ಯಪ್‌ನಿಂದ ಮತ್ತೊಂದು ಆ್ಯಪ್‌ನ ಯುಪಿಐ ಐಡಿಗೆ ಹಣ ವರ್ಗಾವಣೆ) ವಿಧಾನ ಕೋಟ್ಯಂತರ ಬಳಕೆದಾರರಿಗೆ ಅನುಕೂಲಕಾರಿಯಾಗಿದೆ. ಇದೇ ಮಾದರಿಯಲ್ಲಿ ‘ಕ್ರಾಸ್ ಮೆಸೇಜಿಂಗ್’ ಆಯ್ಕೆಯು ಮೆಸೇಜಿಂಗ್ ಆ್ಯಪ್‌ಗಳಲ್ಲಿ ಬಂದರೆ…

ಇಂತಹದ್ದೊಂದು ಆಲೋಚನೆ ಅಸಾಧ್ಯವೇನಲ್ಲ. ಇದು ಸಾಧ್ಯವಾದರೆ, ವಾಟ್ಸ್‌ಆ್ಯಪ್‌ನಂತಹ ಆ್ಯಪ್‌ಗಳೊಂದರ ಮೇಲೆಯೇ ಹೆಚ್ಚು ಅವಲಂಬನೆ ಆಗುವುದನ್ನು, ಸ್ಪರ್ಧಾತ್ಮಕ ಯುಗದಲ್ಲಿ ಏಕಾಧಿಪತ್ಯ ಹೊಂದುವುದನ್ನು ತಪ್ಪಿಸಿದಂತಾಗುತ್ತದೆ. ಇಂದಿನ ಡಿಜಿಟಲ್ ಯುಗದಲ್ಲಿ ಎಲ್ಲವನ್ನೂ ಸ್ಪರ್ಧಾತ್ಮಕವಾಗಿಸಬೇಕಿರುವುದು ಅತ್ಯವಶ್ಯ. ಈ ನಿಟ್ಟಿನಲ್ಲಿ ಎಲ್ಲ ಮೆಸೇಜಿಂಗ್ ಆ್ಯಪ್‌ಗಳು ದೃಷ್ಟಿಹರಿಸಬೇಕಿದೆ.

### ದೇಸೀ ಅರಟ್ಟೈ ಬೆಂಬಲ

‘ಕ್ರಾಸ್ ಮೆಸೇಜಿಂಗ್’ ಮಾದರಿಗೆ ಜೊಹೊ ಕಂಪನಿಯ ಸಂಸ್ಥಾಪಕ ಶ್ರೀಧರ್ ವೆಂಬು ಸಹಮತ ವ್ಯಕ್ತಪಡಿಸಿದ್ದಾರೆ. ತಮ್ಮ ಒಡೆತನದ ‘ಅರಟ್ಟೈ’ ಮೆಸೇಜಿಂಗ್ ಆ್ಯಪ್‌ನಲ್ಲಿ ಈ ಆಯ್ಕೆಯನ್ನು ಪರಿಚಯಿಸುವುದಾಗಿ ಹೇಳಿದ್ದಾರೆ. ಈ ಬಗ್ಗೆ ಈಚೆಗೆ ಮಾತನಾಡಿದ ಅವರು, ‘ಒಂದು ಮೆಸೇಜಿಂಗ್ ಆ್ಯಪ್‌ನ ಗ್ರಾಹಕರು ಮತ್ತೊಂದು ಆ್ಯಪ್‌ನ ಗ್ರಾಹಕರಿಗೆ ಮೆಸೇಜ್ ಕಳಿಸುವ ಮಾದರಿಯನ್ನು ಸಂಸ್ಥೆಗಳು ಅಳವಡಿಸಿಕೊಳ್ಳಬೇಕು’ ಎಂದಿದ್ದರು. ಇದು ಚರ್ಚೆಗೆ ಗ್ರಾಸವಾಗಿತ್ತು.

ಚೆನ್ನೈ ಮೂಲದ ಜೊಹೊ ಕಂಪನಿಯು ‘ಅರಟ್ಟೈ’ ಮೂಲಕ ಹೆಚ್ಚು ಜನಪ್ರಿಯವಾಗಿದೆ. ವಾಟ್ಸ್‌ಆ್ಯಪ್‌ಗೆ ಪರ್ಯಾಯ ಆ್ಯಪ್ ಆಗಿ ಹೊರಹೊಮ್ಮಿದೆ. ತಿಂಗಳ ಹಿಂದಷ್ಟೇ ಅರಟ್ಟೈ ದಾಖಲೆಯ ಪ್ರಮಾಣದಲ್ಲಿ ಡೌನ್‌ಲೋಡ್ ಆಗಿತ್ತು. ಪೇಮೆಂಟ್ಸ್ ಆ್ಯಪ್‌ಗಳಲ್ಲಿ ಇಂತಹ ಸೌಲಭ್ಯವಿದೆ. ಯಾವುದೇ ಆ್ಯಪ್‌ನ ಗ್ರಾಹಕರು ಮತ್ತೊಂದು ಆ್ಯಪ್‌ನ ಗ್ರಾಹಕರಿಗೆ ಸುಲಭವಾಗಿ ಹಣ ಕಳುಹಿಸಬಹುದಾದ ವ್ಯವಸ್ಥೆ ಹೆಚ್ಚು ಜನಪ್ರಿಯವಾಗಿದೆ. ಇದೇ ಮಾದರಿಯನ್ನು ಮೆಸೇಜಿಂಗ್ ಆ್ಯಪ್‌ಗಳು ಅತ್ಯವಶ್ಯವಾಗಿ ಅಳವಡಿಸಿಕೊಳ್ಳಬೇಕು ಎಂಬುದು ಶ್ರೀಧರ್ ವೆಂಬು ವಾದ.

### ಕ್ರಾಸ್ ಮೆಸೇಜಿಂಗ್‌ನತ್ತ ವಾಟ್ಸ್‌ಆ್ಯಪ್

ಬೇರೆ ಬೇರೆ ಮೆಸೇಜಿಂಗ್ ಪ್ಲಾಟ್‌ಫಾರ್ಮ್‌ಗಳ ಬಳಕೆದಾರರಿಗೆ ವಾಟ್ಸ್‌ಆ್ಯಪ್ ಮೂಲಕ ಮೆಸೇಜ್ ಕಳುಹಿಸಲು ಅನುಮತಿಸುವ ಕ್ರಾಸ್ ಮೆಸೇಜಿಂಗ್ ಫೀಚರ್ ಅಭಿವೃದ್ಧಿಗೆ ವಾಟ್ಸ್‌ಆ್ಯಪ್ ಈಗಾಗಲೇ ಮುಂದಾಗಿದೆ ಎಂದು ವಾಬೆಟಾ ಇನ್ಫೊ ವರದಿ ಮಾಡಿದೆ. ಈ ಫೀಚರ್‌ನ ಪ್ರಾಯೋಗಿಕ ಪರೀಕ್ಷೆಯನ್ನು ಯೂರೋಪ್‌ನಲ್ಲಿ ವಾಟ್ಸ್‌ಆ್ಯಪ್ ಮಾಡುತ್ತಿದೆ ಎನ್ನಲಾಗಿದೆ. ಯಶಸ್ವಿಯಾದಲ್ಲಿ ಎಲ್ಲೆಡೆ ಇದನ್ನು ವಾಟ್ಸ್‌ಆ್ಯಪ್ ಪರಿಚಯಿಸಲಿದೆ. ■

## ಬಂತು ಹೊಸ ಆಧಾರ್ ಆ್ಯಪ್



ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ (ಯುಐಡಿಎಐ) ಹೊಸ ‘ಆಧಾರ್’ ಅಪ್ಲಿಕೇಷನ್ ಬಿಡುಗಡೆ ಮಾಡಿದೆ. ಬಳಕೆದಾರರು ಆಧಾರ್ ವಿವರಗಳನ್ನು ತಮ್ಮ ಫೋನ್‌ಗಳಲ್ಲಿ ಸೇವ್ ಮತ್ತು ಇತರರೊಂದಿಗೆ ಸರಳವಾಗಿ ಹಂಚಿಕೊಳ್ಳುವಂತೆ ಆ್ಯಪ್ ವಿನ್ಯಾಸಗೊಳಿಸಲಾಗಿದೆ.

ಈ ಹಿಂದೆ ‘**mAadhaar**’ ಎಂಬ ಅಪ್ಲಿಕೇಷನ್ ಯುಐಡಿಎಐನಿಂದ ಲಭ್ಯವಿತ್ತು. ಈಗ ಹೊಸ ಆ್ಯಪ್ ಪರಿಚಯಿಸಲಾಗಿದೆ. **mAadhaar**ನಲ್ಲಿ ಇದ್ದಂತೆ ಡಿಜಿಟಲ್ ಕಾರ್ಡ್ ಡೌನ್‌ಲೋಡ್, ಪಿವಿಸಿ ಕಾರ್ಡ್‌ಗಾಗಿ ಆರ್ಡರ್ ಮಾಡುವುದು, ಇಮೇಲ್–ಮೊಬೈಲ್ ಸಂಖ್ಯೆ ಪರಿಶೀಲನೆ ಮತ್ತು ವರ್ಚುವಲ್ ಐಡಿ ಉತ್ಪಾದನೆಯಂತಹ ಸೌಲಭ್ಯಗಳನ್ನು ಇದು ಹೊಂದಿಲ್ಲವಾದರೂ ನಿಮ್ಮ ಆಧಾರ್ ವಿವರಗಳನ್ನು ಸಂಗ್ರಹಿಸಲು, ಹಂಚಿಕೊಳ್ಳಲು ಸಹಕರಿಸುತ್ತದೆ. ಎರಡೂ ಆ್ಯಪ್‌ಗಳು ಚಾಲ್ತಿಯಲ್ಲಿರಲಿವೆ.

ಹೊಸ ಆಧಾರ್ ಅಪ್ಲಿಕೇಷನ್ ಡಿಜಿಟಲ್ ಸಂಗ್ರಹಕ್ಕೆ ಉಪಯುಕ್ತವಾಗಲಿದೆ. ನಿಮ್ಮ ಕುಟುಂಬ ಸದಸ್ಯರ ಎಲ್ಲಾ ಆಧಾರ್ ವಿವರಗಳನ್ನು ನೀವು ಈ ಒಂದೇ ವೇದಿಕೆಯಲ್ಲಿ ಸಂಗ್ರಹಿಸಬಹುದು. ಫೇಸ್ ಅಥೆಂಟಿಕೇಷನ್ ವೈಶಿಷ್ಟ್ಯವೂ ಇದೆ. ಈ ಅಪ್ಲಿಕೇಷನ್ ಮೂಲಕ ನಿಮ್ಮ ಕಾರ್ಡ್ ವಿವರಗಳನ್ನು ಹಂಚಿಕೊಳ್ಳಬಹುದು.

ಬಳಕೆದಾರರು ಬಯಸುವ ವಿವರಗಳನ್ನಷ್ಟೇ ಆಯ್ಕೆ ಮಾಡಿಕೊಂಡು, ಹಂಚಿಕೊಳ್ಳುವ ಸೌಲಭ್ಯವಿದೆ. ಆಧಾರ್ ಬಯೋಮೆಟ್ರಿಕ್ ವಿವರಗಳನ್ನು ಲಾಕ್ ಅಥವಾ ಅನ್‌ಲಾಕ್ ಮಾಡುವ ಸೌಲಭ್ಯವೂ ಇದರಲ್ಲಿದೆ. ಈ ಅಪ್ಲಿಕೇಷನ್ ಮೂಲಕ ನಿಮ್ಮ ಆಧಾರ್ ವಿವರಗಳನ್ನು ಕೊನೆಯದಾಗಿ ಎಲ್ಲಿ ಬಳಸಲಾಗಿದೆ ಎಂಬುದನ್ನು ತಿಳಿಯಬಹುದು. ■